**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/263/2019/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 17th January, 2023.

# RECOMMENDATION

Sub: Departmental Inquiry against Shri Dastagir, Village Accountant, Doddakabballi Circle, Kodihalli Hobli, Kanakapura Taluk, Ramanagara District-reg.

Ref: 1) Government Order No.ಕಂಇ 17 ಬಿಡಿಪಿ 2019, Bengaluru, dated: 30/10/2019.

2) Nomination Order No.UPLOK-2/DE/263/2019, Bengaluru, dated: 13/11/2019 of Upalokayukta, State of Karnataka, Bengaluru.

3) Inquiry Report dated: 12/01/2023 of Additional Registrar of Enquiries-14, Karnataka Lokayukta, Bengaluru.

*****

The Government by its order dated: 30/10/2019 initiated the disciplinary proceedings against Shri Dastagir, Village Accountant, Doddakabballi Circle, Kodihalli Hobli, Kanakapura Taluk, Ramanagara District (hereinafter referred to as

Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/263/2019, Bengaluru, dated: 13/11/2019 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO, for the alleged charge of misconduct, said to have been committed by him.

3. The DGO, Shri Dastagir, Village Accountant, Doddakabballi Circle, Kodihalli Hobli, Kanakapura Taluk, Ramanagara District was tried for the following charges:

**ANNEXURE-1**
**CHARGE**

That, you DGO **Sri. Dastagir,** Village Accountant, Doddakabballi Circle, Kodihalli Hobli, Kanakapura Taluk, Ramanagara District, Ramanagara had committed the following misconduct :-

> You-DGO Sri. Dastagir, Village Accountant, Koddakabballi, Kodihalli Hobli, Kanakapura Taluk, Ramanagara District being aware that, the land bearing Sy.No.39 measuring 3 acre 39 guntas situated at Ajjabasavanahalli village, Kodihalli Hobli, Kanakapura Taluk, Ramanagara District is a Government land, released public funds as Drought Relief Fund in favour of Sri Munivenkategowda S/o Kempegowda by citing the above mentioned land as being cultivated by him, you have committed dereliction of duty.

Thus, you DGO, being Government/public servant had failed to maintain absolute integrity and devotion to duty and acted in a

manner unbecoming of Government servant and thus, you have committed misconduct U/Rule 3(1)(i) to (iii) of Karnataka Civil Services (Conduct) Rules, 1966.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'Proved' the charges leveled against DGO, Shri Dastagir, Village Accountant, Doddakabballi Circle, Kodihalli Hobli, Kanakapura Taluk, Ramanagara District.

5. On perusal of the Inquiry Report, in order to prove the guilt of the DGO, the Disciplinary Authority has examined two witnesses i.e., PW-1 and PW-2 and Ex. P-1 to P-4 documents were got marked. DGO has examined himself as DW-1 and got marked Ex. D-1 to D-6 documents.

6. As per the First Oral Statement of DGO furnished by the Inquiry Officer, DGO, Shri Dastagir will retire from service on 30/11/2050.

7. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

8. Having regard to the nature of charge **'Proved'** against DGO, Shri Dastagir, Village Accountant, Doddakabballi Circle, Kodihalli Hobli, Kanakapura Taluk, Ramanagara District and on consideration of the totality of circumstances:-

   "It is hereby recommended to the Government to impose penalty of withholding two annual increments payable to DGO, Shri Dastagir, Village Accountant, Doddakabballi Circle, Kodihalli Hobli, Kanakapura Taluk, Ramanagara District with cumulative effect and also recovery of sum of Rs.12,936/- at eight percent interest per annum from 2018 as per Rule 8(iv) of KCS (CCA) Rules 1957".

9. Action taken in the matter shall be intimated to this Authority.

   Connected records are enclosed herewith.

Sd/- 17/01/23

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/263/2019/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 12/01/2023.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ದಸ್ತಗೀರ್,** ಗ್ರಾಮ ಲೆಕ್ಕಿಗರು, ದೊಡ್ಡಕಬ್ಬಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1) ಕಂಪ್ಲೆಂಟ್/ಉಪಲೋಕ್/ಬಿಡಿ/1471/2018/ಡಿಆರ್‌ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 06-07-2019.
2) ಸರ್ಕಾರದ ಆದೇಶ ಸಂಖ್ಯೆ: ಕಂಇ 17 ಬಿಡಿಪಿ 2019 ಬೆಂಗಳೂರು ದಿನಾಂಕ 30-10-2019
3) ನಾಮ ನಿರ್ದೇಶನ ಸಂಖ್ಯೆ: ಉಪಲೋಕ್-2/ಡಿಇ/263/2019, ಬೆಂಗಳೂರು ದಿನಾಂಕ: 13-11-2019.

* * * * * *

1) ಈ ದೂರನ್ನು, ದೂರುದಾರರಾದ **ಶ್ರೀ ಡಿ.ಎಂ. ಲಿಂಗೇಗೌಡ,** ವಕೀಲರು, ನಂ. 178, 1ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆ, ಇಸ್ರೋ ಲೇಔಟ್, ಬೆಂಗಳೂರು ರವರು ಆಪಾದಿತ ಸರ್ಕಾರಿ ನೌಕರ **ಶ್ರೀ ದಸ್ತಗೀರ್,** ಗ್ರಾಮ ಲೆಕ್ಕಿಗರು, ದೊಡ್ಡಕಬ್ಬಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಅಜ್ಜಬಸವನಹಳ್ಳಿ ಗ್ರಾಮದ ಸರ್ವೆ ನಂ. 39 ರಲ್ಲಿ 3 ಎಕರೆ 39 ಗುಂಟೆ ಸರ್ಕಾರಿ ಜಮೀನು ಇದ್ದು, ಈ ಜಮೀನನ್ನು ಅಕ್ರಮವಾಗಿ ಶ್ರೀ ಮುನಿವೆಂಕಟಗೌಡ,

ಬಿನ್ ಕೆಂಪೇಗೌಡ ಎಂಬುವವರ ಹೆಸರಿಗೆ ಉಲ್ಲೇಖಿಸಿ, ನಿಯಮ ಬಾಹಿರವಾಗಿ ಬರ ಪರಿಹಾರ ಹಣ ರೂ. 12,936/– ಗಳನ್ನು ಬಿಡುಗಡೆ ಮಾಡುವ ಮೂಲಕ, ತದನಂತರ ಸದರಿ ಹಣವನ್ನು ಶ್ರೀ ಮುನಿವೆಂಕಟಗೌಡ ಅವರಿಂದ ಮರಳಿ ಪಡೆದು, ತಮ್ಮ ಬಳಿಯೇ ಇಟ್ಟುಕೊಳ್ಳುವ ಮೂಲಕ ಸರ್ಕಾರಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ ಅಂತ ಹೇಳಿರುತ್ತಾರೆ. ಆದ್ದರಿಂದ, ಇವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 30–10–2019 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 13–11–2019 ರಂದು ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ

3) ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು–14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 06–01–2020 ರಂದು ಕಳುಹಿಸಲಾಗಿರುತ್ತದೆ.

**ANNEXURE NO. 1**
**CHARGE**

4) That, you DGO **Sri. Dastagir,** Village Accountant, Doddakabballi Circle, Kodihalli Hobli, Kanakapura Taluk, Ramanagara District, Ramanagara had committed the following misconduct :-

You-DGO Sri. Dastagir, Village Accountant, Koddakabballi, Kodihalli Hobli, Kanakapura Taluk, Ramanagara District being aware that, the land bearing Sy.No.39 measuring 3 acre 39 guntas situated at Ajjabasavanahalli village, Kodihalli Hobli, Kanakapura Taluk, Ramanagara District is a Government land, released public funds as Drought Relief Fund in favour of Sri Munivenkategowda S/o Kempegowda by citing the above mentioned land as being cultivated by him, you have committed dereliction of duty.

5) Thus, you DGO, being Government/public servant had failed to maintain absolute integrity and devotion to duty and acted in a manner unbecoming of Government servant and thus, you have committed misconduct U/Rule 3(1)(i) to (iii) of Karnataka Civil Services (Conduct) Rules, 1966.

## ANNEXURE NO. II
## STATEMENT OF IMPUTATIONS OF MISCONDUCT

6) An investigation was taken up under Section 9 of The Karnataka Lokayukta Act, 1984, on the basis of complaint filed by Shri. Sri D.M.Lingegowda, Advocate, No.178, 1st Main Road, 6th Cross, ISRO Layout, Bengaluru (hereinafter referred to as complainant for short) against (1) Sri Yoganand,

Tahsildar, Taluk Office, Kanakapura Taluk, Ramanagara District, (2) Nagamurthy, Revenue Inspector, Kodihalli Hobli, Kanakapura Taluk, Ramanagara District and (3) Sri Dastagir, Village Accountant, Doddakabballi, Kodihalli Hobli, Kanakapura Taluk, Ramanagara District (hereinafter referred to as 'respondent Nos. 1 to 3' for short).

7) This complaint was filed alleging that, the DGO being aware that the land bearing Sy. No.39 measuring 3 acres 39 guntas situtated at Ajjabasavanahalli village, Kodihalli Hobli, Kanakapura Taluk, Ramanagara District, is a Government land, he had abused his power by releasing public funds as Drought Relief Fund in favour of Sri Munivenkategowda S/o Kempegowda by citing the above mentioned land as being cultivated by him as such he had committed dereliction of duty. It is further contended that, the other respondents have also contributed in such misconduct of DGO. Hence, he prays for action against the DGO and Sri Yoganand, Tahsildar, Taluk Office, Kanakapura Taluk, Ramanagara District, Sri Nagamurthy, Revenue Inspector, Kodihalli Hobli, Kanakapura Taluk, Ramanagara District.

8) On registration of the complaint, it was noticed that the complainant herein had submitted a representation before the Principal Secretary to the Government, Revenue Department making similar allegations against the DGO and Sri Yoganand, Tahsildar, Taluk Office, Kanakapura Taluk,

Ramanagara District, Sri Nagamurthy, Revenue Inspector, Kodihalli Hobli, Kanakapura Taluk, Ramanagara District. Further, the Principal Secretary through his letter dated: 2.1.2018 had directed the Deputy Commissioner, Ramanagara District to investigate into those allegations and to prepare Articles of Charge against the concerned officers. Similarly, the complainant had also filed representation before the Deputy Commissioner, Ramanagara which was forwarded by him to Assistant Commissioner, Ramanagara through his letter dated: 30.12.2017 for verification which was finally referred to the Tahsildar, Kanakapura through letter dated: 17.1.2018 addressed by Assistant Commissioner, Ramanagara. Therefore, the Deputy Commissioner, Ramanagara was informed in this complaint to submit action taken report on those letters.

9) In response to the intimation issued by this authority, the Deputy Commissioner, Ramanagara District had submitted report dated: 9.10.2018 stating that he had secured report from Assistant Commissioner, Ramanagara Sub-Division on those allegations. In those reports it was stated that land bearing Sy.No.39 of Ajjabasavanahalli village, Kodihalli Hobli, Kanakapura Taluk measures 6 acres 34 guntas, out of which Sri Manjegowda had made a claim for 1 acre 16 guntas; Sri Kempegowda had made a claim for 1 acre 4 guntas and Sri Dandekempegowda had made a claim for 15 guntas under Akrama Sakrama Scheme. The remaining extent of 3 acres

39 guntas was reflected as land belonging to Government as per the entries in the RTC.

10) The report referred to above also indicates that, Sri Munivenkategowda S/o Late Kempegowda claiming to be the occupant on Government land to an extent of 2 acres had submitted an application seeking grant of Drought Relief Fund, although he had not submitted Form-50 and 53 seeking regularisation of his unauthorised cultivation. Even though it was instructed to the officials of Taluk Office, yet the DGO Sri Dastagir being Village Accountant of the said village had approved release of fund as drought relief to the said beneficiary without proper verification of records. Therefore, it was reported that, dereliction of duty on the part of DGO was prima facie established. Hence, the Tahsildar, Kanakapura was informed to prepare Articles of Charge on DGO for his misconduct as per Rule 3 of KCS (Conduct) Rules.

11) On perusal of the said report and its enclosures it was noticed that the DGO had approved payment of Drought Relief Fund to Sri Munivenkategowda S/o Kempegowda by processing the request ID bearing No.4253816. Therefore, the comments of DGO were secured by forwarding copy of the report submitted by Deputy Commissioner, Ramanagara District with its enclosures.



&

12) In response to the intimation issued by this office, the DGO had submitted his comments contending that, his higher officials had instructed him to process the request made by the persons who are unauthorisedly cultivating Government lands and had also submitted applications in Form 50 & 53 seeking regularisation. Accordingly, the application submitted by Sri Munivenkategowda S/o Kempegowda was processed and the amount was paid to him as Drought Relief Fund. However, on subsequent examination of records it was noticed by him that the said Munivenkategowda had not submitted application in Form-50 and 53. Therefore, the DGO has contended that the amount paid as Drought Relief Fund to Sri Munivenkategowda was received back from him by DGO but he was not aware about the details of the Head of Account under which the said amount was to be deposited. As such, it is contended by him that the said amount is retained with him even as on the date of submission of his comments. He had unequivocally admitted that he had committed dereliction of duty for which he has sought excuse by stating that such mistakes will not be repeated hereafter.

13) The report of the Deputy Commissioner, Ramanagara dated: 09.10.2018 and the details of the payment made by DGO in favour of Sri Munivenkategowda indicates that on 24/06/2017 a sum of Rs.697/- was transferred into his account as Drought Relief Fund. Similarly, on 17/4/2017 and 01/07/2017 the DGO had transferred an amount of

Rs.10,880/- and Rs.1,359/- respectively in favour of Sri Munivenkategowda as Drought Relief Fund. Therefore, Sri Munivenkategowda had totally received a sum of Rs.12,936/- as Drought Relief Fund which was transferred by DGO without proper verification of records which has not only resulted in dereliction of duty and misconduct but has also resulted in misappropriation of public money by a public servant as well as causing financial loss to the State Exchequer. Hence, the excuse sought by the DGO in his comments cannot be accepted as his act has resulted in grave misconduct.

14) The statement of DGO in his comments clearly indicate that there has been dereliction of duty on his part in releasing funds to the ineligible beneficiary as detailed above. His comments also indicate that the amount paid to Sri Munivenkategowda as Drought Relief Fund has been received by DGO and retained with him which has been unequivocally admitted. All these aspects not only establish grave misconduct on the part of DGO but also amount to misappropriation of public money by a public servant.

15) Considering these discrepancies and omissions/lapses and misappropriation of public funds on the part of DGO, since disciplinary action could be initiated as the said facts supported by materials placed on record *prima-facie show that* DGO has committed misconduct under Rule



&

3(1)(i) to (iii) of the KCS (Conduct) Rules, 1966, a report u/s 12(3) of Karnataka Lokayukta Act, 1984 was sent to the Competent Authority with a recommendation to initiate disciplinary proceedings against DGO to entrust the inquiry to this Authority U/Rule 14-A of Karnataka Civil Services (Classification, Control and Appeals) Rules, 1957. *In turn*, the Competent Authority initiated disciplinary proceedings against DGO and entrusted the enquiry to this Institution vide reference no. 1 and Hon'ble Upalokayukta-2 has nominated this Enquiry Authority to conduct enquiry and report vide reference Nos. 2 and 3. *Hence*, this charge.

16) ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 06-02-2020 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

17) ಆ.ಸ.ನೌರವರು ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

18) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಬರ ಪರಿಹಾರ ಹಣವನ್ನು ಮೇಲಾಧಿಕಾರಿಗಳು ಸಮಿತಿಯ ಶಿಫಾರಸ್ಸಿನಂತೆ ಹಾಗೂ ಯಾದಿಯಂತೆ ಬಿಡುಗಡೆ ಮಾಡಿರುತ್ತೇನೆ ಅಂತ ಹೇಳಿರುತ್ತಾರೆ. ಶ್ರೀ ಮುನಿವೆಂಕಟಗೌಡ ಇವರು 3 ಎಕರೆ 39 ಗುಂಟೆ ಜಮೀನಿನಲ್ಲಿ 2

ಎಕರೆ ಜಮೀನನ್ನು ಕಳೆದ 28 ರಿಂದ 30 ವರ್ಷಗಳವರೆಗೆ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದು, ಇವರು ಜಮೀನನ್ನು ಅಕ್ರಮ ಸಕ್ರಮಗೊಳಿಸಲು ದಿನಾಂಕ 28-08-2012 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಆದರೆ ಇನ್ನೂ ಮಂಜೂರಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೇ ಬರ ಪರಿಹಾರ ಹಣವನ್ನು ಬಿಡುಗಡೆ ಮಾಡಲು ತನಗೇನು ಅಧಿಕಾರವಿರುವುದಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ ತಾನು ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲವೆಂದು ಹೇಳಿರುತ್ತಾರೆ.

19) ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ಶ್ರೀ ನಾಗಮೂರ್ತಿ ಎನ್, ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ಇವರನ್ನು ಪಿ.ಡಬ್ಲ್ಯು-1 ಎಂದು ಹಾಗೂ ಶ್ರೀ ಯೋಗಾನಂದ ಆರ್, ತಹಶೀಲ್ದಾರ್ ಇವರನ್ನು ಪಿ.ಡಬ್ಲ್ಯು-2 ಎಂದು, ಒಟ್ಟು ನಿ.ಪಿ.-1 ರಿಂದ ನಿ.ಪಿ.-4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ. ರವರು ತಮ್ಮನ್ನು ಡಿ.ಡಬ್ಲ್ಯೂ.-1 ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.-1 ರಿಂದ ನಿ.ಡಿ.-6 ರವರೆಗಿನ ದಾಖಲಾತಿಯನ್ನು ಗುರುತುಪಡಿಸಿಕೊಂಡಿರುತ್ತಾರೆ.

20) ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

21) ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ-1 :** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ-2:** ಆದೇಶವೇನು?



ಠ

22) ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

23) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

24) ಈ ವಿಚಾರಣೆಯಲ್ಲಿ ದೂರುದಾರರಿಗೆ ಸಾಕ್ಷಿ ನುಡಿಯಲು ಅವಕಾಶ ನೀಡಿದಾಗ ಅವರು ಹಾಜರಾಗಿ ಸಾಕ್ಷಿ ನುಡಿಯಲು ಸಮಯಾವಕಾಶ ಕೇಳಿದ್ದರು. ಈ ರೀತಿಯವರೆಗೆ 3-4 ಬಾರಿ ಅವಕಾಶ ನೀಡಿದ್ದರೂ ಸಹ ಸಾಕ್ಷಿ ನುಡಿದಿರುವುದಿಲ್ಲ. ನಂತರ ಅವರು ಹಾಜರಾಗದ ಕಾರಣ ಅವರ ಸಾಕ್ಷಿಯನ್ನು ದಾಖಲಿಸಿಕೊಂಡಿರುವುದಿಲ್ಲ. ಮಂಡನಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರವಾಗಿ ಶ್ರೀ ನಾಗಮೂರ್ತಿ ನಿವೃತ್ತ ಗ್ರಾಮ ಲೆಕ್ಕಾಧಿಕಾರಿಗಳನ್ನು ಪಿ.ಡಬ್ಲ್ಯೂ.-1 ಎಂದು ಸಾಕ್ಷಿಯನ್ನು ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2017 ರಿಂದ 31-05-2019 ರವರೆಗೆ ಕನಕಪುರ ತಾಲ್ಲೂಕು ಕೋಡಿಹಳ್ಳಿ ಹೋಬಳಿಯಲ್ಲಿ ಪ್ರಭಾರ ರಾಜಸ್ವ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು, ಆ ವೇಳೆಯಲ್ಲಿ ಆ.ಸ.ನೌ. ರವರು ದೊಡ್ಡಕಬ್ಬಳ್ಳಿ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಅಂತ ನುಡಿದಿರುತ್ತಾರೆ. ಮುಂದುವರಿದು, ಕನಕಪುರ ತಹಶೀಲ್ದಾರ್‌ರವರು ದಿನಾಂಕ 01-07-2018 ರಂದು ಇವರಿಗೆ ದೊಡ್ಡಕಬ್ಬಳ್ಳಿ ವೃತ್ತದ ಅಜ್ಜಬಸವನಹಳ್ಳಿ ಗ್ರಾಮದ ಸರ್ವೇ ನಂ. 39 ರ ವಿಸ್ತೀರ್ಣ 3 ಎಕರೆಗೆ ಸರ್ಕಾರಿ ಜಮೀನಿಗೆ ಬರ ಪರಿಹಾರ ಮಂಜೂರು ಮಾಡಿರುತ್ತಾರೆ, ಈ ಬಗ್ಗೆ ವರದಿಯನ್ನು ನೀಡುವಂತೆ ಇವರಿಗೆ ತಿಳಿಸಿದ್ದು ಇರುತ್ತದೆ. ನಂತರ ಇವರು ಆ.ಸ.ನೌ. ರೊಂದಿಗೆ ಸದರಿ ಸರ್ವೆ ನಂಬರ್‌ಗೆ ಭೇಟಿ ನೀಡಿದ್ದು, ಅದು ಸರ್ಕಾರಿ ಜಮೀನಾಗಿದ್ದು, ಸದರಿ ಜಮೀನಿನ ಒಟ್ಟು ವಿಸ್ತೀರ್ಣ 6 ಎಕರೆ 34 ಗುಂಟೆಯಾಗಿದ್ದು, ಅದರಲ್ಲಿ 3 ಎಕರೆ 39 ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಜನರಿಗೆ

ಅಕ್ರಮ ಸಕ್ರಮದಡಿಯಲ್ಲಿ 2001–02 ನೇ ಇಸವಿಯಲ್ಲಿ ಜಮೀನು ಮಂಜೂರಾಗಿತ್ತು ಅಂತ ನುಡಿದಿರುತ್ತಾರೆ.

25) ಮುಂದುವರಿದು, ತಮ್ಮ ಮುಖ್ಯ ವಿಚಾರಣೆಯಲ್ಲಿ 3 ಎಕರೆ 39 ಗುಂಟೆ ಜಮೀನಿನಲ್ಲಿ, ಸುಮಾರು 2 ಎಕರೆ ಜಮೀನಿ ಮುನಿವೆಂಕಟಗೌಡ, ಬಿನ್ ಲೇಟ್ ಕೆಂಪೇಗೌಡ ಇವರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರು. ಇವರು 2017 ನೇ ಇಸವಿಯಲ್ಲಿ ಸದರಿ 2 ಎಕರೆ ಜಮೀನಿನಲ್ಲಿ ಹುರಳೀ ಬೆಳೆಯನ್ನು ಬೆಳೆದಿದ್ದು, ಅವರಿಗೆ ಬರ ಪರಿಹಾರ ಧನವನ್ನು ಕೊಡಬೇಕೆಂದು ಆದೇಶ ಮಾಡಿರುತ್ತಾರೆ ಅಂತ ನುಡಿದಿರುತ್ತಾರೆ. ಮುಂದುವರಿದು, ಆ.ಸ.ನೌ. ರವರು ಮುನಿವೆಂಕಟಗೌಡ ಇವರಿಗೆ ನಮೂನೆ 50 ಅಥವಾ 53 ಸಲ್ಲಿಸದಿದ್ದರೂ ಸಹ, ಅವರಿಗೆ ಬರ ಪರಿಹಾರ ಹಣವನ್ನು ಮಂಜೂರು ಮಾಡಿರುತ್ತಾರೆ ಅಂತ ನುಡಿದಿರುತ್ತಾರೆ. ಈ ಬಗ್ಗೆ ಇವರು ತಹಶೀಲ್ದಾರ್ ಇವರಿಗೆ ವರದಿಯನ್ನು ಸಲ್ಲಿಸಿದ್ದು, ಅದನ್ನು ನಿ.ಪಿ.–1 ಎಂದು ಹಾಗೂ ಆ.ಸ.ನೌ. ರವರು ಇವರಿಗೆ ಸಲ್ಲಿಸಿದ ವರದಿಯನ್ನು ನಿ.ಪಿ.–2 ಎಂದು ಗುರುತಿಸಿಕೊಂಡಿರುತ್ತಾರೆ.

26) ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಶ್ರೀ ಯೋಗಾನಂದ ಆರ್., ತಹಶೀಲ್ದಾರ್ ಇವರನ್ನು ಪಿ.ಡಬ್ಲ್ಯು–2 ಎಂದು ವಿಚಾರಣೆ ಮಾಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇವರು ದಿನಾಂಕ 20–10–2016 ರಿಂದ 20–10–2018 ರವರೆಗೆ ಕನಕಪುರದಲ್ಲಿ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಪಿ.ಡಬ್ಲ್ಯು–1 ಇವರು ರಾಜಸ್ವ ನಿರೀಕ್ಷಕರಾಗಿ, ಆ.ಸ.ನೌ. ರವರು ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಿನಾಂಕ 17–01–2018 ರಂದು ಉಪ ವಿಭಾಗಾಧಿಕಾರಿಗಳು, ರಾಮನಗರ ಉಪ ವಿಭಾಗ ಇವರು ಒಂದು ಪತ್ರವನ್ನು ಬರೆದು ದೂರುದಾರರು ಅಜ್ಜಬಸವನಹಳ್ಳಿ ಗ್ರಾಮದ ಸರ್ವೆ ನಂ. 39 ರ ಸರ್ಕಾರಿ ಜಮೀನಿಗೆ ಅಕ್ರಮವಾಗಿ ಬರ ಪರಿಹಾರ ಹಣವನ್ನು ಆ.ಸ.ನೌ. ರವರು ಹಾಗೂ ತಹಶೀಲ್ದಾರ್ ರವರು ಮಂಜೂರು ಮಾಡಿಸಿಕೊಂಡು, ಸರ್ಕಾರಕ್ಕೆ ವಂಚಿಸಿರುವ ಬಗ್ಗೆ ದೂರು ಅರ್ಜಿಯನ್ನು ಸಲ್ಲಿಸಿದ್ದು, ಈ ಬಗ್ಗೆ ರಾಜಸ್ವ ನಿರೀಕ್ಷಕರು ಹಾಗೂ ಆ.ಸ.ನೌ. ರರಿಂದ ವರದಿಯನ್ನು ಪಡೆದುಕೊಳ್ಳಲು ಸೂಚಿಸಿರುತ್ತಾರೆ ಅಂತ ನುಡಿದಿರುತ್ತಾರೆ. ಸದರಿ ಪತ್ರವನ್ನು ನಿ.ಪಿ.3 ಎಂದು ಗುರುತಿಸಿಕೊಂಡಿರುತ್ತಾರೆ.

27) ಮುಂದುವರಿದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ರಾಜಸ್ವ ನಿರೀಕ್ಷಕರಿಂದ ಹಾಗೂ ಆ.ಸ.ನೌ. ರಿಂದ ವರದಿಯನ್ನು ಪಡೆದುಕೊಂಡು, ಅವುಗಳನ್ನು ಆಧಾರಿಸಿ ಉಪ ವಿಭಾಗಾಧಿಕಾರಿಯವರಿಗೆ ನಿ.ಪಿ.-4 ರಂತೆ ವರದಿಯನ್ನು ಸಲ್ಲಿಸಿರುತ್ತೇನೆ ಅಂತ ನುಡಿದಿರುತ್ತಾರೆ. ಇವರ ವರದಿಯಲ್ಲಿ ಅಜ್ಜಬಸವನಹಳ್ಳಿ ಗ್ರಾಮದ ಸರ್ವೆ ನಂ. 39 ರಲ್ಲಿ 2 ಎಕರೆ ವಿಸ್ತೀರ್ಣ ದಲ್ಲಿ ಮುನಿವೆಂಕಟಗೌಡ ಇವರು ವ್ಯವಸಾಯ ಮಾಡುತ್ತಿದ್ದು, ಇವರುಗಳು ಪ್ರಸ್ತಾಪಿತ ಜಮೀನುಗಳನ್ನು ಮಂಜೂರಾತಿಗಾಗಿ ನಮೂನೆ 50 ಅಥವಾ 53 ರಡಿಯಲ್ಲಿ ಅರ್ಜಿ ಸಲ್ಲಿಸಿಕೊಂಡಿರುವುದಿಲ್ಲ. ರಾಜಸ್ವ ನಿರೀಕ್ಷಕರು ತನ್ನ ವರದಿಯಲ್ಲಿ ನಮೂನೆ 50 ಅಥವಾ 53 ರಡಿ ಅರ್ಜಿ ಸಲ್ಲಿಸಿಕೊಂಡಿದ್ದರೆ ಮಾತ್ರ ಬರ ಪರಿಹಾರ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ ಅಂತ ತಿಳಿಸಿರುತ್ತಾರೆ. ಆದರೆ, ಆ.ಸ.ನೌ. ಈ ಬಗ್ಗೆ ಪರಿಶೀಲನೆ ಮಾಡದೇ, ಬರ ಪರಿಹಾರ ಹಣವನ್ನು ಮಂಜೂರು ಮಾಡಿರುತ್ತಾರೆ ಅಂತ ನುಡಿದಿರುತ್ತಾರೆ.

28) ಆ.ಸ.ನೌ. ರು ತಮ್ಮನ್ನು ಡಿ.ಡಬ್ಲ್ಯು-1 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಇವರು ತಮ್ಮ ಸಾಕ್ಷಿಯಲ್ಲಿ ಮುನಿವೆಂಕಟಗೌಡ ಇವರು ಸವೇ ನಂ. 39 ರಲ್ಲಿ 2 ಎಕರೆ ಜಮೀನನ್ನು ಬಗರ್ ಹುಕುಂ ಸಾಗುವಳಿಯನ್ನು 15 ರಿಂದ 20 ವರ್ಷಗಳವರೆಗೆ ಮಾಡುತ್ತಿದ್ದು, 2 ಎಕರೆ ಜಮೀನನ್ನು ಸಕ್ರಮ ಮಾಡಿಕೊಳ್ಳಲು ಸುಮಾರು ವರ್ಷಗಳ ಹಿಂದೆ ಅರ್ಜಿಯನ್ನು ಕೊಟ್ಟಿದ್ದು, ಹಿಂದಿನ ರಾಜಸ್ವ ನಿರೀಕ್ಷಕರು ಸ್ಥಳ ಪರಿಶೀಲನೆ ಮಾಡಿ ದಿನಾಂಕ 22-11-1995 ರಂದು ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ಪ್ರತಿಯನ್ನು ನಿ.ಡಿ.6 ಎಂದು ಗುರುತಿಸಿಕೊಂಡಿರುತ್ತಾರೆ. ಮುಂದುವರಿದು, ವೆಂಕಟಗೌಡ ಇವರು ದಿನಾಂಕ 30-06-2012 ರಲ್ಲಿ ಸದರಿ ಜಮೀನಿಗೆ ಸಾಗುವಳಿ ಚೀಟಿ ಪಡೆಯಲು ತಹಶೀಲ್ದಾರ್‌ರವರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಅಂತ ನುಡಿದಿರುತ್ತಾರೆ.

29) ಮುಂದುವರಿದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇದೇ ದೂರುದಾರನು ಮುನಿವೆಂಕಟಗೌಡ ಇವರ ವಿರುದ್ಧ ಅಸಲ್ ದಾವಾ ನಂ. 333/2012 ನ್ನು ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಕನಕಪುರ ಇವರಿಗೆ ಸಲ್ಲಿಸಿದ್ದು ಇರುತ್ತದೆ. ಈ ಬಗ್ಗೆ ದಾವೆಯ ಆದೇಶ ಪುಟ, ವಾದ ಪತ್ರ, ಪ್ರತಿವಾದ ಪತ್ರದ ದೃಢೀಕೃತ ಪತ್ರಗಳನ್ನು ಸಲ್ಲಿಸಿದ್ದು

ಇರುತ್ತದೆ. ಅವುಗಳೆಲ್ಲವನ್ನು ನಿ.ಡಿ.-4 ಎಂದು ಗುರುತಿಸಲಾಗಿದೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ, ಸದರಿ ದಾವೆಯು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಇರುವುದಿಲ್ಲ. ಅಲ್ಲದೇ, ಈ ದಾವೆಯನ್ನು ನಂತರ ದೂರುದಾರರು ಮರಳಿ ಪಡೆದಿರುತ್ತಾರೆ. ಆ.ಸ.ನೌ. ರವರು ಬರ ಪರಹಾರ ನಿಧಿಯಿಂದ ಬೆಳೆ ನಾಶಕ್ಕೆ ನೀಡುವ ಬರ ಪರಿಹಾರಕ್ಕೆ ಸಂಬಂಧಪಟ್ಟಂತೆ ಚೆಕ್ ಲಿಸ್ಟನ್ನು ಹಾಜರು ಪಡಿಸಿದ್ದು, ಅದನ್ನು ನಿ.ಡಿ-1 ಎಂದು ಗುರುತಿಸಿಕೊಂಡಿರುತ್ತಾರೆ. ದಿನಾಂಕ 27-01-2017 ರಂದು ತಹಶೀಲ್ದಾರ್, ಕನಕಪುರ ಇವರು ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು, ಅದನ್ನು ನಿ.ಡಿ.-2 ಎಂದು, ದಿನಾಂಕ 15-09-2022 ರಂದು ತಹಶೀಲ್ದಾರ್, ಕನಕಪುರ ಇವರು ಆರಕ್ಷಕ ವೃತ್ತ ನಿರೀಕ್ಷಕರು, ಕೋಡಿಹಳ್ಳಿ ಪೊಲೀಸ್ ಠಾಣೆ, ಕನಕಪುರ ಇವರಿಗೆ ಸಲ್ಲಿಸಿದ ವರದಿ ನಿ.ಡಿ.-3, ಆರಕ್ಷಕ ಉಪ ನಿರೀಕ್ಷಕರು, ಕೋಡಿಹಳ್ಳಿ ಪೊಲೀಸ್ ಠಾಣೆ, ಕನಕಪುರ ಇವರು ಅಪರಾಧ ಸಂಕ್ಯೆ 89/2019 ರಲ್ಲಿ ಸಲ್ಲಿಸಿದ ಅಂತಿಮ ವರದಿ (ಬಿ ರಿಪೋರ್ಟ್) ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿ.ಡಿ.-5 ಎಂದು ಗುರುತಿಸಿಕೊಂಡಿರುತ್ತಾರೆ.

30) ಈ ವಿಚಾರಣೆಯಲ್ಲಿ ಶ್ರೀ ಮುನಿವೆಂಕಟಗೌಡ ಇವರು ಸರ್ವೇ ನಂ. 3 ಎಕರೆ 39 ಗುಂಟೆಯಲ್ಲಿ 2 ಎಕರೆ ಜಮೀನನ್ನು ಬಗರ್ ಹುಕುಂ ನಿಂದ ಸಾಗುವಳಿ ಮಾಡುತ್ತಿದ್ದರು ಎನ್ನುವ ಬಗ್ಗೆ ವಿವಾದ ಇರುವುದಿಲ್ಲ. ಅದರಂತೆ ಮುನಿವೆಂಕಟಗೌಡ ಇವರಿಗೆ ಬರ ಪರಿಹಾರ ಹಣವನ್ನು ದಿನಾಂಕ 24-06-2017 ರಂದು ರೂ. 697/-, ದಿನಾಂಕ 17-04-2017 ರಂದು ರೂ. 10,880/- ಹಾಗೂ 01-07-2017 ರಂದು ರೂ. 1,359/- ಹೀಗೆ ಒಟ್ಟು ರೂ. 12,936/- ಗಳನ್ನು ಮುನಿವೆಂಕಟಗೌಡ ಇವರ ಖಾತೆಗೆ ಜಮಾ ಆದ ಬಗ್ಗೆ ವಿವಾದ ಇರುವುದಿಲ್ಲ.

31) ಈ ವಿಚಾರಣೆಯಲ್ಲಿ ವಿವಾದದ ಸಂಗತಿ ಎಂದರೆ, ಶ್ರೀ ಮುನಿವೆಂಕಟಗೌಡ ಇವರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರು, ಇವರು ಅದನ್ನು ಸಕ್ರಮಗೊಳಿಸಲು ಸಂಬಂಧಪಟ್ಟ ತಹಶೀಲ್ದಾರ್ ರವರಿಗೆ ಫಾರಂ ನಂ. 50 ಅಥವಾ 53 ನ್ನು ಸಲ್ಲಿಸಿರುವುದಿಲ್ಲ. ಕಾರಣ ಅವರಿಗೆ ಬರ ಪರಿಹಾರ ಹಣ ಮಂಜೂರು ಮಾಡಲು ಬರುವುದಿಲ್ಲ, ಈ ಬಗ್ಗೆ ಆ.ಸ.ನೌ. ರವರು ದಾಖಲಾತಿಗಳನ್ನು ಪರಿಶೀಲನೆ ಮಾಡದೇ, ಹಣ ಮಂಜೂರು ಮಾಡಲು ಶಿಫಾರಸ್ಸು ಮಾಡಿದ್ದು,

ಅಲ್ಲದೇ ಸರಿಯಾಗಿ ದಾಖಲೆಗಳನ್ನು ಪರಿಶೀಲನೆ ಮಾಡದೇ, ಶಿಫಾರಸ್ಸು ಮಾಡಿರುತ್ತಾರೆ ಅಂತ ಮಂಡನಾಧಿಕಾರಿಗಳ ವಾದ ಇರುತ್ತದೆ. ಆ.ಸ.ನೌ. ರ ಪ್ರಕಾರ ಮುನಿವೆಂಕಟಗೌಡ ಇವರು ದಿನಾಂಕ 30-06-2012 ರಲ್ಲಿಯೇ ಸದರಿ ಜಮೀನಿಗೆ ಸಾಗುವಳಿ ಚೀಟಿ ಪಡೆಯಲು ತಹಶೀಲ್ದಾರ್ ರವರಿಗೆ ಅರ್ಜಿಯನ್ನು ಕೊಟ್ಟಿರುತ್ತಾರೆ ಅಂತ ಹೇಳಿರುತ್ತಾರೆ. ಆದರೆ, ಈ ಬಗ್ಗೆ ಆಸ.ನೌ. ರವರು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಆ.ಸ.ನೌ. ರವರ ಪ್ರಕಾರ ದಿನಾಂಕ 22-11-1995 ರಲ್ಲಿ ರಾಜಸ್ವ ನಿರೀಕ್ಷಕರು ಈ ಜಮೀನಿಗೆ ಸಂಬಂಧಪಟ್ಟಂತೆ ಪಂಚನಾಮೆಯನ್ನು ಮಾಡಿದ್ದು, ಅದರಲ್ಲಿ ಶ್ರೀ ಮುನಿವೆಂಕಟಗೌಡ ರವರು ಸಾಗುವಳಿ ಚೀಟಿಗಾಗಿ ಅರ್ಜಿ ಸಲ್ಲಿಸಿದ್ದು, ನಮೂದು ಇರುತ್ತದೆ ಅಂತ ಹೇಳಿದ್ದು, ಆದರೆ ಸದರಿ ದಾಖಲೆಯನ್ನು ಅಂದರೆ ನಿ.ಡಿ.-6 ನ್ನು ಪರಿಶೀಲಿಸಿದಾಗ ಈ ರೀತಿ ಯಾವುದೇ ಸಾಗುವಳಿ ಚೀಟಿ ಸಲ್ಲಿಸಿದ ಬಗ್ಗೆ ನಮೂದು ಇರುವುದಿಲ್ಲ. ಅಲ್ಲದೇ ಮುನಿವೆಂಕಟಗೌಡ ಇವರಿಗೆ ಸಾಗುವಳಿ ಚೀಟಿ ಮಂಜೂರಾಗಿದ್ದು, ಆ ಪ್ರಕಾರ ಅವರ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ ಎನ್ನುವ ಬಗ್ಗೆ ಆ.ಸ.ನೌ. ರವರು ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ಸಾಗುವಳಿ ಚೀಟಿ ಪಡೆಯಬೇಕಾದವರು ನಿಯಮ 108(ಸಿ) ಕರ್ನಾಟಕ ಭೂ ಕಂದಾಯ ನಿಯಮ 1966 ರ ಪ್ರಕಾರ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಈ ನಿಯಮದ ಬಗ್ಗೆ ಈ ಕೆಳಗಿನಂತೆ ಓದಲಾಗಿದೆ:-

**Rule 108-C**

**Application for Grant of Land**:- (1) Any person who is in unauthorized occupation of any land may make an application in writing to the Tahsildar of the Taluk in Form 50 along with a fee of Rupees Two payable by affixing a Court Fee Stamp.
(2) Immediately on receipt of application under sub-rule (1), the Tahsildar shall cause the particulars of the application to be entered in a register which shall be in Form 51 kept in his office. He shall, thereafter, place the application before the Committee (or the Additional

Committee) after such scrutiny as may be necessary.

**108-CC:- Procedure under Section 94-B:**
(1) For the purpose of Section 94 to the Tahsildar of the concerned Taluk shall on receipt of an application or by issuing a public notice in Form No. 53 and by sending individual notice to the occupants in Form No. 54 identify the unauthorized occupants.

(2) He shall thereafter prepare a list of persons eligible for grant in accordance with the provisions of Section 94-B in Form No. 55 and enter the details in a register, kept in Form 56 and shall within a period of three months from the date of issues of public notice send all related documents to the Deputy Commissioner or other officer authorized under Section 94-B.

(3) The Deputy Commissioner or other officer authorized under Section 94-B shall on receipt of documents from the Tahsildar make spot inspection, examine the documents and circumstantial evidence, determine the eligibility or otherwise (the Tahsildar shall forward ineligible applications to the Deputy Commissioner for further necessary action and the Deputy Commissioner shall reject the ineligible applications. The Tahsildar shall thereafter make the recommendation to the committee. The Tahsildar shall thereafter make the recommendation to the committee or additional committee regarding eligible applications within three months from the date of receipt of report).

(4) Provisions of sub-rule (3) , (4) and (5) of Rule 10 shall mutatis mutandis apply for the purpose of grant of land under Section 94-B.

ಆದರೆ, ಈ ನಿಯಮದ ಪ್ರಕಾರ ಶ್ರೀ ಮುನಿವೆಂಕಟಗೌಡ ಇವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತಾರೆ ಅಂತ ತೋರಿಸಲು ಆ.ಸ.ನೌ.ರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

32) ಈ ವಿಚಾರಣೆಯಲ್ಲಿ ಆ.ಸ.ನೌ.ರು ಬರ ಪರಿಹಾರ ನಿಧಿಯಿಂದ ಬೆಳೆ ನಾಶಕ್ಕೆ ನೀಡುವ ಬೆಳೆ ಪರಿಹಾರಕ್ಕೆ ಸಂಬಂಧಿಸಿದಂತೆ ಚೆಕ್ ಲಿಸ್ಟನ್ನು ಹಾಜರು ಪಡಿಸಿರುತ್ತಾರೆ. ಸದರಿ ಚೆಕ್ ಲಿಸ್ಟ್‌ಗೆ ಆ.ಸ.ನೌ.ರು ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಸಹಿ ಮಾಡಿರುತ್ತಾರೆ. ಸದರಿ ದಾಖಲಾತಿಯನ್ನು ನಿ.ಡಿ.–1 ಎಂದು ಗುರುತಿಸಲಾಗಿದ್ದು, ಅದರಲ್ಲಿ ಆ.ಸ.ನೌ. ರು ಕ್ರಮ ಸಂಖ್ಯೆ 6 ರಲ್ಲಿ ಸರ್ಕಾರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಲ್ಲಿ, ನಮೂನೆ 50, 53 ಸಲ್ಲಿಸಿದ್ದಾರೆಯೇ ಅನ್ನುವುದಕ್ಕೆ "ಹೌದು" ಎಂದು ನಮೂದಿಸಲಾಗಿದೆ. ಅಂದರೆ ಈ ದಾಖಲೆಯ ಪ್ರಕಾರ ಶ್ರೀ ಮುನಿವೆಂಕಟಗೌಡ ಇವರು ನಮೂನೆ 50, 53 ನ್ನು ಸಲ್ಲಿಸಿರುತ್ತಾರೆ ಅಂತ ಆ.ಸ.ನೌ.ರು ನಮೂದು ಮಾಡಿರುತ್ತಾರೆ. ಆದರೆ, ಈಗಾಗಲೇ ಮೇಲೆ ಹೇಳಿದ ಹಾಗೆ ಯಾವುದೇ ದಾಖಲಾತಿಗಳನ್ನು ಆ.ಸ.ನೌ. ರು ಸಲ್ಲಿಸಿರುವುದಿಲ್ಲ.

33) ಆ.ಸ.ನೌ.ರ ಪರ ವಕೀಲರು ಬರ ಪರಿಹಾರ ಹಣ ಪೂರ್ತಿಯಾಗಿ ಸರ್ವೆ ನಂ. 39 ಕ್ಕೆ ಮಾಡಿದ್ದು ಕಂಡುಬರುತ್ತಿದ್ದು, 2 ಎಕರೆಗೆ ಮಾತ್ರ ಸಂಬಂಧಿಸಿದ್ದು ಇರುವುದಿಲ್ಲ ಅಂತ ಹೇಳಿರುತ್ತಾರೆ. ಆದರೆ, ನಿ.ಡಿ.–1 ನ್ನು ಪರಿಶೀಲಿಸಿದಾಗ, ಅದರಲ್ಲಿ ಸರ್ವೆ ನಂ. 39 ರಲ್ಲಿ ಕೇವಲ 2 ಎಕರೆ ಜಮೀನಿನ ಬಗ್ಗೆ ಆ.ಸ.ನೌ. ರು ಹೇಳಿರುತ್ತಾರೆ. ಅದರಂತೆ, ಆ.ಸ.ನೌ ರವರು ತಹಶೀಲ್ದಾರ್ ರವರು ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು, ಅದರ ಜೊತೆಗೆ 3 ಆನ್‌ಲೈನ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಆನ್ ಲೈನ್ ದಾಖಲಾತಿಗಳನ್ನು ಪರಿಶೀಲಿಸಿದಾಗ, ಶ್ರೀ ಮುನಿವೆಂಕಟಪ್ಪಗೌಡ ಇವರಿಗೆ ದಿ. 24-06-2017 ರಂದು ರೂ. 679/–, ದಿ. 17–04–2017 ರಂದು ರೂ. 10,880/– ಹಾಗೂ ದಿ. 01–06–2017 ರಂದು ರೂ. 1,359/– ಗಳನ್ನು ಮುನಿವೆಂಕಟಗೌಡ ಇವರಿಗೆ ರಾಮನಗರ ಜಿಲ್ಲೆಯಲ್ಲಿರುವ ಯೂಕೋ ಬ್ಯಾಂಕಿಗೆ ಬರ ಪರಿಹಾರ ಹಣ ಎಂದು ಜಮೆ ಆಗಿರುತ್ತದೆ ಅಂತ ಕಂಡುಬರುತ್ತದೆ.

34) ಈ ವಿಷಯಕ್ಕೆ ಸಂಬಂಧಪಟ್ಟಂತೆ, ಇವರ ಮೇಲೆ ಕೋಡಿಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಲಾಗಿದ್ದು, ಅದರಲ್ಲಿ ತನಿಖಾಧಿಕಾರಿಗಳು 'ಬಿ' ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಅಂತ ನಿ.ಡಿ.–5 ನ್ನು ಹಾಜರು ಪಡಿಸಿರುತ್ತಾರೆ. ಸದರಿ 'ಬಿ' ಅಂತಿಮ ವರದಿಯು ನ್ಯಾಯಾಲಯದಲ್ಲಿ ಸ್ವೀಕೃತಿಗೊಂಡಿರುತ್ತದೆಯೋ ಇಲ್ಲವೋ ಎಂಬುದಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಆ.ಸ.ನೌ.ರು ದಿ. 15–09–2022 ರಂದು ತಹಶೀಲ್ದಾರ್ ರವರು ಆರಕ್ಷಕ ವೃತ್ತ ನಿರೀಕ್ಷಕರು, ಕೋಡಿಹಳ್ಳಿ ಪೊಲೀಸ್ ಠಾಣೆಗೆ ಒಂದು ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಚೆಕ್ ಲಿಸ್ಟ್‌ನಲ್ಲಿ (ನಿ.ಡಿ.–1) ಕಾಲಂ ನಂ. 6 ರಲ್ಲಿ ಸರ್ಕಾರಿ ಜಮೀನಿನಲ್ಲಿ ವ್ಯವಸಾಯ ಮಾಡಿತ್ತಿದ್ದು, ನಮೂನೆ 50, 53 ಸಲ್ಲಿಸಿದ್ದರೆ ಅಥವಾ ಕಾಲಂ ನುಂ. 7 ರಲ್ಲಿ ನಮೂನೆ 50, 53 ರಂತೆ ಬಾಕಿ ಇದ್ದರೂ ಸಹ, ಇಂತಹ ಫಲಾನುಭವಿಗಳಿಗೆ ಅವರ ದಾಖಲೆಗಳನ್ನು ಪಡೆದು, ಬೆಳೆ ಪರಿಹಾರ ನೀಡಬಹುದೆಂದು ಸೂಚಿಸಿರುತ್ತಾರೆ. ಚೆಕ್‌ಲಿಸ್ಟ್ ನಲ್ಲಿ ಕಾಲಂ ನಂ. 7 ನ್ನು ಪರಿಶೀಲಿಸಿದಾಗ ನಮೂನೆ 50, 53 ರಂತೆ ಸಾಗುವಳಿ ಚೀಟಿ ನೀಡಿದ್ದು, ಖಾತೆ ಮಾಡದೇ ಬಾಕಿ ಇದೆಯೇ ಅನ್ನುವ ಬಗ್ಗೆ ಮಾಹಿತಿಯನ್ನು ಸಲ್ಲಿಸಲು ಇರುತ್ತದೆ. ನಿ.ಡಿ.–1 ರಲ್ಲಿ ಆ.ಸ.ನೌ.ರು ಕಾಲಂ ನಂ. 7 ರ ಮುಂದೆ ಖಾಲಿ ಬಿಡಲಾಗಿದೆ. ಅಂದರೆ ಸಾಗುವಳಿ ಚೀಟಿ ನೀಡಿದ್ದು ಇರುವುದಿಲ್ಲ ಅಂತ ಕಂಡುಬರುತ್ತದೆ. ಆದ್ದರಿಂದ, ಶ್ರೀ ಮುನಿವೆಂಕಟಗೌಡ ಇವರ ಹೆಸರು ಖಾತೆಯಲ್ಲಿ ದಾಖಲಾಗಿರುವುದಿಲ್ಲ. ಆದ್ದರಿಂದ, ನಿ.ಡಿ.–3 ರಲ್ಲಿ ನಮೂನೆ 50, 53 ಬಾಕಿ ಇದ್ದರೂ ಸಹ ಫಲಾನುಭವಿಗಳಿಗೆ ಬೆಳೆ ಪರಿಹಾರ ನೀಡಬಹುದೆಂದು ಕಾಲಂ ನಂ. 7 ರಲ್ಲಿ ಸೂಚಿಸಿರುತ್ತಾರೆ ಅನ್ನುವ ವಿಷಯ ತಪ್ಪಾಗಿ ಅರ್ಥೈಸಿಕೊಂಡು ಹೇಳಿದ್ದು ಕಂಡುಬರುತ್ತದೆ. ಇದಲ್ಲದೇ, ಆ.ಸ.ನೌ.ರು ದೂರುದಾರರು ಸಲ್ಲಿಸಿದ ದೂರಿಗೆ ಆಕ್ಷೇಪಣೆ ಸಲ್ಲಿಸಲು ಕೇಳಿದ್ದು, ಅದಕ್ಕೆ ಆ.ಸ.ನೌ.ರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ "ತದನಂತರ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ಶ್ರೀ ಮುನಿವೆಂಕಟೇಗೌಡ, ಬಿನ್ ಕೆಂಪೇಗೌಡ ಇವರು ನಮೂನೆ ನಂ. 50 ಅಥವಾ 53 ಸಲ್ಲಿಸಿಕೊಂಡಿಲ್ಲದೇ ಇರುವುದು ಕಂಡುಬಂದಿದ್ದರಿಂದ, ಸದರಿ ಪರಿಹಾರದ ಮೊತ್ತವನ್ನು ಅವರಿಂದ ವಾಪಸ್ ಪಡೆಯಲಾಗಿರುತ್ತದೆ. ಆದರೆ, ಕಚೇರಿಯಲ್ಲಿ ಸದರಿ ವಾಪಸ್ ಪಡೆದ ಹಣವನ್ನು ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ



B.

ಸರ್ಕಾರಕ್ಕೆ ವಾಪಸ್ ತುಂಬಬೇಕೆಂದು ಕೇಳಿದಲ್ಲಿ ತಿಳಿಸಿರುವುದಿಲ್ಲ. ಆದ್ದರಿಂದ, ದಾಖಲೆಗಳನ್ನು ಕ್ರಮ ಬದ್ಧವಾಗಿ ಪರಿಶೀಲಿಸದೇ ಪರಿಹಾರದ ಹಣವನ್ನು ಮಂಜೂರು ಮಾಡಿರುವುದು ಇವರಿಂದ ತಪ್ಪಾಗಿರುತ್ತದೆ ಅಂತ ಹೇಳಿರುತ್ತಾರೆ". ಈ ಎಲ್ಲಾ ವಿಷಯಗಳನ್ನು ಪರಿಶೀಲಿಸಿದಾಗ, ಮಂಡನಾಧಿಕಾರಿಗಳು ಅಂಶ ನಂ. 1ನ್ನು ರುಜುವಾತು ಪಡಿಸಿರುತ್ತಾರೆ.

35) ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು **ಸಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

**36) ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ದಸ್ತಗೀರ್**, ಗ್ರಾಮಲೆಕ್ಕಿಗರು, ದೊಡ್ಡಕಬ್ಬಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ಅಂದರೆ ಆಸ.ನೌ. ರವರು ಶ್ರೀ ಮುನಿವೆಂಕಟಗೌಡ ಇವರು ಸರ್ವೆ ನಂ. 39 ರಲ್ಲಿ 2 ಎಕರೆಗೆ ಸಂಬಂಧಪಟ್ಟಂತೆ, ನಮೂನೆ 50 ಮತ್ತು 53 ನ್ನು ಸಲ್ಲಿಸದೇ ಇರುವುದರಿಂದ, ಅವರಿಗೆ ಬರ ಪರಿಹಾರದ ಹಣವನ್ನು ಮಂಜೂರು ಮಾಡಿದ್ದು, ಅಲ್ಲದೇ ಮಂಜೂರಾದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿರುವುದಿಲ್ಲ ಎಂದು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 31/10/2050 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

12/1/23

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl No. | | Particulars of Documents |
|---|---|---|
| 1 | | **Witness examined on behalf of the Disciplinary Authority** |
| | **PW.1** | Sri. Nagamurthy, S/o Late Narasaiah, Retired Village Accountant (Original) |
| | **PW-2** | Sri. Yogananda R, S/o P. Ramanna, Tahsildar, Virajpet (Original) |
| 2 | | **Documents marked on behalf of the Disciplinary Authority Ex.P-1 to Ex.P-4** |
| | **Ex,P1, P1(a)** | Complaint and Signature of the complainant (Original) |
| | **Ex.P2, P2(a)** | Report of Village Accountant, Dastagir and signature. (Original) |
| | **Ex.P3,** | Letter dated 17-01-2018 of Assistant Commissioner, Ramanagar Sub-Division, Ramanagar (xerox) |
| | **Ex.P4, P4(a)** | Letter dated 29-06-2018 of Tahsildar, Kanakapura Taluk, Kanakapura (original) |
| 3 | | **Witness examined on behalf of the DGO** |
| | **DW.1** | Sri. Dastagir, S/o Mehaboob Jaalageri, Village Accountant (Original) |

| 4 | **Documents marked on behalf of the DGO** | |
|---|---|---|
| | **Ex D.1** | Check list (Xerox) |
| | **Ex.D.2** | Endorsement dated 27/11/2017 of Tahsildar, Kanakapura Taluk, Kanakapura and enclosures (Xerox) |
| | **Ex.D-3** | Letter dated 15-09-2022 of Tahsildar, Kanakapura Taluk, Kanakapura (Attested copy) |
| | **Ex.D-4** | Order Sheet of Principal Civil Judge (Jr.Division) & JMFC, Kanakapura in O.S. No. 333/2012 and documents (Certified copies) |
| | **Ex.D-5** | 'B' report in Crime No. 0089/2019 dated 25/07/2019 (True copy) |
| | **Ex.D-6** | Mahazar dated 22-11-1995 (Attested copy) |

Receipt of the above report and original records may kindly be acknowledged.

Paradeshi 12/1/23

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.